xv) ವಿಷಯ: ಪಾವಗಡದ ಕೆಲವು ಗ್ರಾಮಗಳಲ್ಲಿ ಶಂಕಿತ ಡೆಂಗ್ಯೂಜ್ವರ ಕಾಣಿಸಿಕೊಂಡಿದ್ದು ತಜ್ಞ ವೈದ್ಯ, ಫಿಜಿಷಿಯನ್ ಕೊಡಬೇಕಾಗಿರುವ ಬಗ್ಗೆ.

ಶ್ರೀ ಕೆ. ಎಂ. ತಿಮ್ಮರಾಯಪ್ಪ (ಪಾವಗಡ): ಮಾನ್ಯ ಅಧ್ಯಕ್ಷರೆ, ಪಾವಗಡ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಶಂಕಿತ ಡೆಂಗ್ಯೂ ಜ್ವರ ಬಂದು ತುಂಬಾ ಸಮಸ್ಯೆಯಾಗಿದೆ. ಅಲ್ಲಿ ವೈದ್ಯರ ಕೊರತೆ ಬಹಳವಿದೆ. ಬಡವರು ಬೆಂಗಳೂರಿಗೆ ಬರುವುದಕ್ಕೆ ಅಲ್ಲಿ ವೈದ್ಯರು ರೇಪರ್ ಮಾಡುತ್ತಾರೆ. ಅಲ್ಲಿ ತಜ್ಞ ವೈದ್ಯರಾರು ಇಲ್ಲ, ಅಲ್ಲಿ ಒಬ್ಬ ಫಿಜಿಷಿಯನ್ ಹಾಕಿ ಸೇವೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತು ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಬರುವುದಕ್ಕೆ ₹5000 ರಿಂದ 6000 ದಂಡು ವೆಚ್ಚವಾಗಿ ಹಣ ಕೇಳುತ್ತಿದ್ದಾರೆ, ಆ ಬಡವರು ಅಲ್ಲಿಗೆ ಬರುವುದಕ್ಕಾಗುವುದಿಲ್ಲ ಆಸ್ಪತ್ರೆಯಲ್ಲಿ ತಜ್ಞ ವೈದ್ಯ, ಫಿಜಿಷಿಯನ್ ಕೊಟ್ಟು ಶಂಕಿತ ಡೆಂಗ್ಯೂ ಜ್ವರವನ್ನು ಅಲ್ಲಿ ನಿರ್ಮೂಲನೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ (ಆರೋಗ್ಯ ಸಚಿವರ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ತಿಮ್ಮರಾಯಪ್ಪನವರು ಪಾವಗಡದಲ್ಲಿ ಶಂಕಿತ ಡೆಂಗ್ಯೂ ಜ್ವರ ಕಾಣಿಸಿಕೊಂಡಿದೆ ಮತ್ತು ಅದಕ್ಕೆ ವೈದ್ಯಾಧಿಕಾರಿಗಳ ಕೊರತೆ ಇದೆ ಎಂದು ಹೇಳಿದರು, ಅದಕ್ಕೆ ನಾನೇ ಖುದ್ದಾರಿ DHO ಅವರಿಗೆ ಸೂಚನೆಯನ್ನು ಕೊಟ್ಟು ಅಲ್ಲಿನ ಪರಿಹಾರ ಕಾರ್ಯಕ್ರಮ ಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸಲಾಗುವುದು.

ಶ್ರೀ ಕೆ. ಎಂ. ತಿಮ್ಮರಾಯಪ್ಪ: ಅಲ್ಲಿ ತಜ್ಞ ವೈದ್ಯರು ಒಬ್ಬರಿದ್ದರೆ, ಅಲ್ಲಿಗೆ ಬಡವರು, patients ಗೆ ಅನುಕೂಲವಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ: ತಾತ್ಕಾಲಿಕವಾಗಿಯಾದರೂ ಕೂಡ deputation ಮೇಲೆಯಾದರೂ ಅಲ್ಲಿಗೆ ಹಾಕಿ ನಾನು ಪರಿಹಾರ ಕೊಡುತ್ತೇನೆ.

ಅಧ್ಯಕ್ಷರು: Prevention ಗೆ ಕ್ರಮ ತೆಗೆದುಕೊಳ್ಳಿ.